**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿಸಿ.ನಂ.2634/2020**

**ಸಿ.ಡಬ್ಲ್ಯೂ-05**

**ಪಿ.ಡಬ್ಲ್ಯೂ-01**

| | |
|---|---|
| ಸಾಕ್ಷಿಯ ಹೆಸರು | : ಅಣ್ಣಪ್ಪ ಕಾಟೆ |
| ತಂದೆ/ಗಂಡನ ಹೆಸರು | : ದಗಡು |
| ವಯಸ್ಸು | : 49 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಭತಗುಣಕಿ |

**ದಿನಾಂಕ:12-03-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ 1 ನನ್ನ ಚಿಕ್ಕಪ್ಪನ ಮಗ. ಚಾಸಾ 4 ನನ್ನ ಅಣ್ಣನ ಮಗ. ಚಾಸಾ 6 ರವರ ಇರುತ್ತದೆ. ನನಗೆ ಈ ಘಟನೆಯ ಕುರಿತು ಯಾವುದೇ ಮಾಹಿತಿ ಇಲ್ಲ. ಆರೋಪಿತರು ಅಕ್ರಮವಾಗಿ ಪ್ರವೇಶ ಮಾಡಿ ತಡೆಹಿಡಿದು ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದ:**

ದಿಃ24.06.2020 ರಂದು ಮಧ್ಯಾಹ್ನ 2 ಗಂಟೆಗೆ ನಮ್ಮ ಜಮೀನಿನ ಸರ್ವೆ ನಂ.78/2 ರ ವಿಸ್ತೀರ್ಣ 2 ಎಕರೆ 8 ಗುಂಟೆ ಜಮೀನಿನಲ್ಲಿ ನಾನು ಮತ್ತು ಚಾಸಾ 1 ಮತ್ತು 4 ರವರು ಚಾಸಾ 6 ರವರ ಜಮೀನಿನಲ್ಲಿ ಅವರ ಟ್ರಾಕ್ಟರನಿಂದ ತೋಗರಿ ಬಿತ್ತುತ್ತಿದ್ದಾಗ ಮಧ್ಯಾಹ್ನ 2.30 ಗಂಟೆಗೆ ಆರೋಪಿತರು ನಮ್ಮ ಜಮೀನಿನಲ್ಲಿ ಅತೀಕ್ರಮಣ ಮಾಡಿ ನಾವು ಜಮೀನು ಬಿತ್ತುತ್ತಿರುವ ಟ್ರಾಕ್ಟರಗೆ ಅಡ್ಡಗಟ್ಟಿ ನಿಲ್ಲಿಸಿ 1 ಹಾಗೂ 3 ರಿಂದ 5 ನೇ

ಆರೋಪಿತರು ಈ ಜಮೀನಿನಲ್ಲಿ ನಮಗೂ ಪಾಲು ಬರುತ್ತದೆ ಪಾಲು ಕೊಡದೇ ಇದ್ದರೆ ನಿಮ್ಮನ್ನು ಸಾಯಿಸಿ ಜಮೀನಿನಲ್ಲಿ ಪಾಲು ಪಡೆಯುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. 2 ಮತ್ತು 6 ನೇ ಆರೋಪಿತರು ನಮಗೆ ಅಡ್ಡಗಟ್ಟಿ ಬಿಗಿ ಹಿಡಿದು ಜಮೀನಿನಲ್ಲಿ ಬಿತ್ತುವುದನ್ನು ನಿಲ್ಲಿಸಿ ಈ ಜಮೀನಿನಲ್ಲಿ ಬಿತ್ತಬೇಡಿ ಎಂದು ತಾಕಿತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ಚಾಸಾ 1 ರಮರ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿಃ29.06.2020 ರಂತೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಆರೋಪಿತರು ಅಣ್ಣ ತಮ್ಮಂದಿರು ಆಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**